# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 13.06.2011**

ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಇಂದು ತಪಾಸಣೆ ಕೈಗೊಂಡು ಕೆ.ಆರ್. ಮಾರುಕಟ್ಟೆಯ ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಪಾದಚಾರಿ ಸುರಂಗ ಮಾರ್ಗದ ಒಂದು ಭಾಗವನ್ನು ಜುಲೈ ತಿಂಗಳ ಒಳಗಾಗಿ ಪೂರ್ಣಗೊಳಿಸಿ, ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿಕೊಡಲು ಕಾರ್ಯಪಾಲಕ ಅಭಿಯತರರು (ಯೋಜನೆ) ರವರಿಗೆ ಆದೇಶ ನೀಡಿದರು.

590 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಳೆದ 6 ವರ್ಷಗಳಿಂದ ನಿರ್ಮಾಣಗೊಳ್ಳುತ್ತಿದೆ. ಈ ಯೋಜನೆ ನಿರ್ಮಾಣ ಕಾರ್ಯದಲ್ಲಿ ಸಾಕಷ್ಟು ವಿಳಂಬವಾಗಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ ಮತ್ತು ಪಾಲಿಕೆ ಘನತೆಗೂ ಕೂಡಾ ಧಕ್ಕೆ ಉಂಟಾಗಿದೆ. ಕಾಮಗಾರಿಯಲ್ಲಿ ಅಡಚಣೆಯಾಗುವ ಜಲಮಂಡಳಿ ಪೈಪ್‌ಗಳನ್ನು ತೆಗೆದು ಬೇರೆ ಕಡೆಗೆ ಹಾಕುವಲ್ಲಿ ವಿಳಂಬವಾಗಿದೆ ಎಂಬ ವಿಷಯ ಗೊತ್ತಿದೆ. ಆದರೂ ಇಷ್ಟರಮಟ್ಟಿಗೆ ವಿಳಂಬವಾಗಿರೋದು ಸರಿಯಲ್ಲ. ಆದ್ದರಿಂದ ಸಂಬಂಧಪಟ್ಟ ಅಭಿಯಂತರರುಗಳು ಯಾವುದೇ ನೆಪ ಒಡ್ಡದೇ ಗುತ್ತಿಗೆದಾರರ ಮೇಲೆ ಒತ್ತಡ ಹಾಕಿ ಹಗಲು ರಾತ್ರಿ ಕೆಲಸ ಮಾಡಿ, ಜುಲೈ ತಿಂಗಳ ಒಳಗಾಗಿ ಅಂಡರ್‌ಪಾಸಿನ ಒಂದು ಭಾಗದ ಕಾಮಗಾರಿ ಪೂರ್ಣಗೊಳಿಸಲು ಆದೇಶ ನೀಡಿದರು. ಉಳಿದ ಭಾಗವನ್ನು ಇನ್ನು 3 ತಿಂಗಳ ಒಳಗಾಗಿ ಪೂರ್ಣಗೊಳಿಸಲು ತಿಳಿಸಿದರು.

ತದನಂತರ ಮಾರುಕಟ್ಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಪರಿಶೀಲನೆ ನಡೆಸಿ, ನಾಳೆಯಿಂದ ಸ್ವಚ್ಛತೆ ಕಾರ್ಯವನ್ನು ತೀವ್ರಗೊಳಿಸಲು ಮತ್ತು ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಲು ಸಹಾಯಕ ಅಭಿಯಂತರರಿಗೆ ಸೂಚನೆ ನೀಡಿದರು.

ತಪಾಸಣೆ ಸಂದರ್ಭದಲ್ಲಿ ಉಪ ಮಹಾಪೌರರಾದ ಶ್ರೀ ಎಸ್. ಹರೀಶ್, ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ರಾಮಚಂದ್ರ, ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ, ಪಾಲಿಕೆ ಸದಸ್ಯರಾದ ಶ್ರೀ ಪಿ. ಧನರಾಜ್ ಮತ್ತು ಶ್ರೀ ಜಿ.ಎ. ಅಶ್ವತ್ಥ ನಾರಾಯಣ, ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**